ಸಂಭವಿಸಿರುವ ಘಟನೆ ಮತ್ತು ಪರಿಸ್ಥಿತಿಯ ಬಗ್ಗೆ ವಿವರಿಸಿದರು. ಇವತ್ತು ಹೆಚ್ಚು ಗ್ರಾಹಕರು ಬಂದಿಲ್ಲ, ಆದರೆ ನಾಳೆ ಖಂಡಿತಾ ಬರುತ್ತಾರೆ ಎಂದು ಭರವಸೆ ಕೊಟ್ಟರು. ಆದರೆ ಪ್ರತಿ ಅಂಗಡಿಯವರು, ನಿಯೋಜಕರಲ್ಲಿಯೇ ತಪ್ಪು ಕಂಡು ಹಿಡಿಯತೊಡಗಿದ್ದರು.

ಭಾವೇಶ್ ಅವರಿಗೆ ಶೈನೀ ಬೆನ್ ಸಫಲ ಆಯೋಜಕರೆಂದು ತಿಳಿದಿತ್ತು. ಈವೆಂಟ್ ಮ್ಯಾನೇಜ್‌ಮೆಂಟ್ ವಲಯದಲ್ಲಿ ಶೈನೀ ಬೆನ್ ಅವರ ಹೆಸರು ಪ್ರಸಿದ್ಧವಿತ್ತು. ಅವರ ಪ್ರದರ್ಶನದಲ್ಲಿ ಸ್ಟಾಲ್ ಸಿಗುವುದೇ ದೊಡ್ಡ ವಿಷಯವಾಗಿತ್ತು. ಅವರ ಇಷ್ಟೆಲ್ಲ ವರ್ಷಗಳ ಈ ಅನುಭವ ಮತ್ತು ಆತ್ಮವಿಶ್ವಾಸದಿಂದ ಶೈನೀ ಬೆನ್ ಎಲ್ಲ ಅಂಗಡಿಯವರಿಗೂ ಹಾಗೆ ಹೇಳಿದ್ದರು. ಮರುದಿನ ಕರ್ಫ್ಯೂ ತೆಗೆದೊಡನೆ, ಗ್ರಾಹಕರ ನೂಕು ನುಗ್ಗಲು ಆಗುವಷ್ಟು ಸಂಖ್ಯೆಯಲ್ಲಿ ಆಗಮಿಸಿದ್ದರು. ಉದ್ಯಮದ ಅನಿರೀಕ್ಷಿತ ಪರಿಸ್ಥಿತಿಗಳಲ್ಲೂ ಭಾವೇಶ್ ತಮ್ಮ ಸಹನೆ ಮತ್ತು ವಿಶ್ವಾಸವನ್ನು ಕಳೆದುಕೊಳ್ಳುತ್ತಿರಲಿಲ್ಲ. ಅನಿವಾರ್ಯ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವ ಅವರಿಗೆ ಯಾರ ಬಗ್ಗೆಯೂ ದೂರು ಇರುತ್ತಿರಲಿಲ್ಲ. ಬದುಕಿನ ಏರುಪೇರುಗಳಲ್ಲಿ ಸ್ಥಿತಪ್ರಜ್ಞ ಸ್ಥಿತಿ ಅವರದು. ಬಹುಶಃ ಅವರ ಸ್ನೇಹ ಸಂಬಂಧಗಳು ಬಹು ಕಾಲ ಉಳಿಯುವ ಹಿಂದಿನ ಗುಟ್ಟು ಇದಾಗಿತ್ತು.

ಸಂಜೆ ಆಗುವ ಹೊತ್ತಿಗೆ ಭಾವೇಶ್ ಅವರು ಕೊಂಡೊಯ್ದ ಮೋಂಬತ್ತಿಗಳು ಮುಗಿಯತೊಡಗಿತ್ತು. ಕವಿತಾ ಬಾಭಿ ಪ್ರತಿಯೊಂದು ಪ್ರಕಾರದ ಒಂದೊಂದು ಮೋಂಬತ್ತಿಯನ್ನು ಜೋಪಾನವಾಗಿ ಇಟ್ಟುಕೊಂಡಿದ್ದರು. ಮೂರನೇ ದಿನ ಬಂದ ಗ್ರಾಹಕರಿಗೆ ಆ ಕ್ಯಾಂಡಲ್‌ಗಳ ನಮೂನೆಗಳನ್ನೇ ತೋರಿಸಿ ಆರ್ಡರ್ ತೆಗೆದುಕೊಂಡರು. ತಕ್ಷಣವೇ ಮಹಾಬಲೇಶ್ವರಕ್ಕೆ ಫೋನ್ ಮಾಡಿ ಆರ್ಡರ್ ಪ್ರಕಾರ ಮೋಂಬತ್ತಿಗಳನ್ನು ತಯಾರಿಸುವ ನಿರ್ದೇಶನವನ್ನೂ ಕೊಟ್ಟರು. ಕಾರಣ ದೀಪಾವಳಿ ಬಹಳ ಹತ್ತಿರವಿತ್ತು. ನಂತರ ಈ ಎಲ್ಲ ಮೋಂಬತ್ತಿಗಳ ಆರ್ಡರ್‌ಗಳನ್ನು ಒಪ್ಪಿಕೊಂಡ ಸಮಯಕ್ಕೆ ಸರಿಯಾಗಿ ಮಹಾಬಲೇಶ್ವರದಿಂದ ಕಳುಹಿಸುವ ವ್ಯವಸ್ಥೆಯನ್ನೂ ಮಾಡಿದರು. ಸತ್ಯೇನ್ ಭಾಯಿ ತಮ್ಮ ಕೋರ್ಟ್ ಕಚೇರಿಯ ಕೆಲಸದಿಂದ ಒಂದಿಷ್ಟು ಸಮಯವನ್ನು ತೆಗೆದುಕೊಂಡು ಭಾವೇಶ್ ಅವರ ಸ್ಟಾಲ್‌ಗೆ ಬಂದು ಸಹಾಯ ಮಾಡಿದರು. ಪ್ರತಿ ಬಾರಿಯಂತೆ ಕವಿತಾ ಬಾಭೀ ಊಟ, ಉಪಾಹಾರಕ್ಕೆ ಟಿಫಿನ್ ಬಾಕ್ಸ್; ನೀರು, ಚಹಾಗೆ ಥರ್ಮಾಸ್ ಎಲ್ಲದರ ವ್ಯವಸ್ಥೆ ಮಾಡಿದ್ದರು. ಸ್ವತಃ ಸ್ಟಾಲ್‌ನಲ್ಲಿ ಹಲವು ಬಾರಿ ಉಳಿದು ನೆರವಾದರು. ಭಾವೇಶ್ ಅವರು ಹೆಚ್ಚು ಗಮನವನ್ನು ಎದುರು ನಿಂತ ಗ್ರಾಹಕರಿಗೆ ಕೊಡಲು ಸಾಧ್ಯವಾಗುತ್ತಿತ್ತು. ಗ್ರಾಹಕರೊಡನೆ ಮಾತನಾಡುವುದು, ಅವರಿಗೆ ತಮ್ಮ ಉತ್ಪನ್ನಗಳ ಬಗ್ಗೆ ವಿವರಿಸುವುದನ್ನು ಭಾವೇಶ್ ಅತ್ಯಂತ ಮುತುವರ್ಜಿಯಿಂದ ಮಾಡುತ್ತಿದ್ದರು. ಈ ಕೆಲಸವನ್ನು ಶ್ರದ್ಧೆ ಇಟ್ಟು ಮಾಡಲಿಲ್ಲ ಎಂದರೆ, ಗ್ರಾಹಕ ಮರುಕ್ಷಣವೇ ಮುಂದಿನ ಸ್ಟಾಲ್‌ಗೆ ಹೊರಟು ಹೋಗುತ್ತಾನೆ ಎಂಬ ಅರಿವು ಅವರಿಗಿತ್ತು.


ಕಿಂಗ್‌ಫಿಷರ್‌ಗಾಗಿ ರೂಪಿಸಿದ ಬಿಯರ್ ಮಗ್ ರೂಪದ ಕ್ಯಾಂಡಲ್‌ನೊಂದಿಗೆ ಭಾವೇಶ್

ಯಾರಿಗಾರೋ ಎನುವ ನಾಸ್ತಿಕತೆಯನು ನೂಕಿ ಬೆಸೆದ ಸ್ನೇಹ ಸತ್ಯೇನ್ ಭಾಯಿ ಮತ್ತು ಕವಿತಾ ಬಾಭೀ ಅವರದು. ಒಡಹುಟ್ಟಿದವರಲ್ಲ, ರಕ್ತ ಸಂಬಂಧಿಗಳಲ್ಲ, ಆದರೆ ಹೃದಯದ ಸಂಬಂಧಗಳಿಗೆ ಸರಹದ್ದಿಲ್ಲ. ಅವರ ಪ್ರಯತ್ನ ಇಂದಿಗೂ ಅಂಧ ತಂಡಕ್ಕೆ ಮೇಲ್ಬರಲು ಸಹಾಯಕವಾಗಿದೆ; ಭಾವೇಶ್ ಅವರ ಉದ್ಯಮ ಹಿಗ್ಗಿ ಹೆಚ್ಚು ಅಂಧರನ್ನು ತಮ್ಮ ಸನ್‌ರೈಸ್ ಕ್ಯಾಂಡಲ್ಸ್ ಜೊತೆಗೆ ಜೋಡಿಸಲು ಸಾಧ್ಯವಾಗಿದೆ.

ಗುಜರಾತ್ ಹೈಕೋರ್ಟ್ ಎದುರಿಗೆ ಸತ್ಯೇನ್ ಭಾಯಿ ಅವರ ದೊಡ್ಡ ಕಾರ್ಯಾಲಯವಿದೆ. ಅಲ್ಲಿ ಅವರ ಬಹಳಷ್ಟು ಕಿರಿಯ ವಕೀಲರು ಕೆಲಸ ಮಾಡುತ್ತಾರೆ. ಅಲ್ಲೇ ಒಂದು ಕೊಠಡಿಯಲ್ಲಿ ಗಾಜಿನ ಒಂದು ದೊಡ್ಡ ಅಲಮಾರಿಯಲ್ಲಿ ಭಾವೇಶ್ ಅವರ ಮೋಂಬತ್ತಿಗಳನ್ನು ಇಟ್ಟಿದ್ದಾರೆ. ಗುಜರಾತ್ ಹೈ ಕೋರ್ಟ್‌ನ ಯಾವುದೇ ಕಾರ್ಯಕ್ರಮಗಳಲ್ಲಿ ಉಡುಗೊರೆ ಕೊಡಬೇಕಾದಾಗ, ಪುಷ್ಪಗುಚ್ಛವನ್ನು ನೀಡುವ ಬದಲು, ಅಲಮಾರಿನಲ್ಲಿರುವ ಮೋಂಬತ್ತಿಗಳನ್ನು ತರಿಸುತ್ತಾರೆ. ಅಲ್ಲಿ ಎಷ್ಟು ಒಳ್ಳೆಯ ವ್ಯವಸ್ಥೆ ಇದೆ ಎಂದರೆ, ಆ ಅಲಮಾರಿನಲ್ಲಿ ಒಂದು ಹಣದ ಡಬ್ಬಿಯನ್ನು ಇಟ್ಟಿದ್ದಾರೆ. ಮೋಂಬತ್ತಿಯ ಮೇಲಿರುವ ಬೆಲೆಯನ್ನು ನೋಡಿ, ಕೊಂಡ ವ್ಯಕ್ತಿ ಅದರಲ್ಲಿ ಹಣವನ್ನು ಹಾಕುತ್ತಾನೆ. ನಂತರ ಅಲ್ಲಿ ಕೂಡಿಕೊಂಡ ಮೊತ್ತವನ್ನು ಸನ್‌ರೈಸ್‌ನ ಖಾತೆಯಲ್ಲಿ ಜಮೆ ಮಾಡುತ್ತಾರೆ. ಅವರಿಂದ ಫೋನ್ ಬಂದೊಡನೆ, ಮಹಾಬಲೇಶ್ವರದಿಂದ ಅಹಮದಾಬಾದ್‌ಗೆ ಮೋಂಬತ್ತಿಗಳನ್ನು ಕಳುಹಿಸಿಕೊಡುತ್ತಾರೆ. ಇದು ಕಳೆದ ಅದೆಷ್ಟೋ ವರ್ಷಗಳಿಂದ ನಡೆದುಬಂದಿದೆ. ಸ್ಪೀಡ್ ಆಫ್ ಟ್ರಸ್ಟ್ ಎಂದರೆ ಬಹುಶಃ ಇದೇ ಇರಬೇಕು. ಅಹಮದಾಬಾದಿನಿಂದ ಯಾರೇ ದೊಡ್ಡ ವಕೀಲರು, ನ್ಯಾಯಾಧೀಶರು ಮಹಾಬಲೇಶ್ವರಕ್ಕೆ ಬಂದಾಗ, ಭಾವೇಶ್ ಅವರನ್ನು ಹುಡುಕಿ ಬಂದು ಭೇಟಿಯಾಗುತ್ತಿದ್ದರು. ಇದು ಸಾಧ್ಯವಾಗಿದ್ದು, ಸತ್ಯೇನ್ ಭಾಯಿ ಭಾವೇಶ್ ಅವರತ್ತ ತೋರಿದ ಅಪಾರ ಸ್ನೇಹ ಪ್ರೀತಿಯಿಂದ.

ಉದ್ಯಮದಲ್ಲಿ ಬರೀ ಲಾಭವನ್ನು ಯೋಚಿಸಿ ಭಾವೇಶ್ ಎಂದೂ ಮುಂದುವರೆದವರಲ್ಲ, ಅವರು ಜನರ ಹೃದಯವನ್ನು ಸ್ಪರ್ಶಿಸುತ್ತಿದ್ದರು. ಅವರೊಡನೆ ಬದುಕಿನುದ್ದದ ಸ್ನೇಹ ಸಂಬಂಧ ಏರ್ಪಡುತ್ತಿತ್ತು. ಅವರಲ್ಲಿ ನಾನೊಬ್ಬನು ಬದುಕಿದರೆ ಸಾಕು ಎಂಬ ಅಪ್ಪಟ ವ್ಯಾಪಾರಿಯ ನಡತೆ ಎಂದೂ ಕಾಣಲಿಲ್ಲ. ನಾನು, ನನ್ನ ತಂಡ ಮಾತ್ರವಲ್ಲ, ನನ್ನ ಗ್ರಾಹಕರು, ನನ್ನೊಂದಿಗೆ ಕೂಡಿದವರು, ಜೊತೆಯಾದವರು, ಇಡೀ ಸಮಾಜದ ಒಳಿತನ್ನು ಅವರು ಯೋಚಿಸುವ ಕಾರಣ, ಅವರ ಸ್ನೇಹ ವೃಂದ ಹಿಗ್ಗಿತು, ಉದ್ಯಮ ಬೆಳೆಯಿತು. ಅದು ಅವರೊಬ್ಬರನ್ನು ಶ್ರೀಮಂತವಾಗಿಸಿದ ಉದ್ಯಮವಲ್ಲ, ಅವರೊಡನೆ ಜೊತೆಯಾದ ನೂರಾರು ಅಂಧರನ್ನು, ಅವರ ಕುಟುಂಬಗಳನ್ನು ಸ್ವಾವಲಂಬನೆಯ ಹಾದಿಗೆ ತಂದ ಸ್ವಾಭಿಮಾನದ ಅಭಿಯಾನ.

ತಾನೊಬ್ಬನು ಉದ್ಧಾರವಾದರೆ ಸಾಕು, ಇತರರ ತಲೆಯ ಮೇಲೆ ಕಾಲಿಟ್ಟಾದರೂ ಮೇಲೇರಬೇಕು ಎಂಬುವವರು, ಬ್ಯಾಂಕ್‌ಗಳನ್ನು ಲೂಟಿ ಮಾಡಿ ವಿದೇಶಕ್ಕೆ ಹಾರಿದವರು ತೋರುವ ಉದ್ಯಮದ ಮಾದರಿ ಸಸ್ಟೇನೆಬಲ್ ಅಲ್ಲ ಎಂದು ಜಗತ್ತು ಮೆಲ್ಲನೆ ಎಚ್ಚೆತ್ತುಕೊಳ್ಳುತ್ತಿದೆ. ಮುಂದೊಮ್ಮೆ ಕಿಂಗ್ ಫಿಶರ್ ಕಂಪನಿ ಭಾವೇಶ್ ಅವರಿಗೆ ಮೂರೂವರೆ ಲಕ್ಷ ಬಿಯರ್ ಮಗ್‌ನ ಆಕಾರದ ಮೋಂಬತ್ತಿಗಳನ್ನು ಮಾಡುವ ಆರ್ಡರ್ ನೀಡಿತ್ತು. ಅವುಗಳನ್ನು ಸಮಯಕ್ಕೆ ಸರಿಯಾಗಿ ಮಾಡಿ ತಲುಪಿಸಿದ್ದರು. ಸದ್ಯ ದೇಶ ಬಿಟ್ಟು ಹಾರುವ ಮೊದಲೇ ನನ್ನ ಹಣ ಪಾವತಿಯಾಗಿತ್ತು ಎಂದು ಭಾವೇಶ್ ನಗೆಯಾಡುತ್ತಾರೆ. ಉದ್ಯಮಕ್ಕೆ ಕೇವಲ ಮೆದುಳು ಬಳಸುವುದನ್ನು ಗುರುಗಳು ಕಲಿಸಿದ್ದರು. ಹೃದಯವನ್ನು ತೊಡಗಿಸುವುದನ್ನು ಭಾವೇಶ್‌ಗೆ ಬದುಕು ಕಲಿಸಿತ್ತು.

(ಸಶೇಷ)